ಗೊಂದಲ

ಶ್ರೀ ಡಿ.ಬಿ. ಚಂದ್ರೇಗೌಡ :– ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ರಾಯಪುರಕ್ಕೆ ಹೋಗಿದ್ದರು ಎಂದು ಕಾಣುತ್ತದೆ. ಏನೋ ಲೋಕ ಸಭೆಯ ಚುನಾವಣೆಯ ಸಿದ್ಧತೆ ನಡೆದಂತೆ ಕಾಣುತ್ತದೆ. ಈ ಆಕ್ಟಿವಿಟೀಸ್ ನೋಡಿದರೆ

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೇ, ಇವತ್ತು ನಾವು ರೈತರ ಪರವಾಗಿ ಹೋರಾಟ ಮಾಡುತ್ತಿದ್ದೇವೆ. ಚುನಾವಣೆಯ ಜ್ವರ ನಿಮಗೆ ಬಂದಿದೆ. ಇವತ್ತು ಲೋಕ ಸಭೆಯಲ್ಲಿ ಏನು ಮಾಡುತ್ತಿದ್ದೀರಿ? ನಾಳೆ ಏನು ಮಾಡುತ್ತಿದ್ದೀರಿ ಎಂದು ನಮಗೆಲ್ಲಾ ಗೊತ್ತಿದೆ. ಚುನಾವಣೆಯ ಜ್ವರ ಅವರಿಗೆ ಸ್ಟಾರ್ಟ್ ಆಗಿದೆ. ಕಾಂಗ್ರೆಸ್‌ಗೆ ಚುನಾವಣೆಯ ಜ್ವರ ಸ್ಟಾರ್ಟ್ ಆಗಿದೆ.

ಗೊಂದಲ

ಶ್ರೀ ಬಿ. ಸೋಮಶೇಖರ್ :– ಮಾನ್ಯ ಅಧ್ಯಕ್ಷರೇ, ಸರ್ಕಾರ ಇಷ್ಟೊಂದು ಪ್ರತಿಷ್ಠಿತವಾಗಿ ನಿಲ್ಲಬಾರದು ಏಕೆಂದರೆ ಇವತ್ತು ಬಹಳ ಗಂಭೀರವಾದ ಪರಿಸ್ಥಿತಿ ಉದ್ಭವವಾಗಿದೆ. ನಾವು ವಿರೋಧ ಪಕ್ಷದವರು ನಾಲ್ಕಾರು ಬೇಡಿಕೆಗಳನ್ನು ಹೇಳಿದ್ದೆವು. ಅದು ಒಂದು ಸದನದ ಸಮಿತಿ ರಚನೆ ಮಾಡಬೇಕು, ವೈಟ್ ಪೇಪರ್ ಬಿಡುಗಡೆ ಮಾಡಬೇಕು, ಇದು ಒಂದು, ಮತ್ತೆ ಈ ಸಾಲ ವಸೂಲಾತಿ ನಿಲ್ಲಿಸಬೇಕೆಂದು, ಮತ್ತೆ ಕನ್‌ವರ್ಷನ್ ಮಾಡಬೇಕು. ಅದಲ್ಲದೆ.....

ಗೊಂದಲ

ಅಧ್ಯಕ್ಷರು :– ಅದಕ್ಕೆ ಉತ್ತರ ಹೇಳಿದ್ದಾರೆ ಬಿಡಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ಮಾನ್ಯ ಅಧ್ಯಕ್ಷರೇ, ಇದೇನು ಯಾವುದಾದರೂ ಒಂದನ್ನು ಮಾಡಲಿ. ಧರಣಿ ಮಾಡಲಿ. ಅಥವಾ ಭಾಷಣ ಮಾಡಲಿ.

ಗೊಂದಲ

ಅಧ್ಯಕ್ಷರು :– ನಾನು ಮಾನ್ಯ ಸದಸ್ಯರೆಲ್ಲ ಇಷ್ಟೇ ಕೇಳುವುದು ಮಾನ್ಯ ಸದಸ್ಯರಲ್ಲಿ ನನ್ನದೊಂದು ವಿನಂತಿ ದಯವಿಟ್ಟು ಮುಂದಿನ ಕಾರ್ಯಕ್ರಮ ನಡೆಸಿಕೊಳ್ಳುವುದಕ್ಕೆ ಎಲ್ಲರೂ ತಮ್ಮ ಜಾಗಗಳಿಗೆ ಹೋಗಿ. ಮಾನ್ಯ ಮುದ್ದಹನುಮೇಗೌಡರೇ, ಕಬ್ಬಿನ ಬಗ್ಗೆ ಹೇಳಿ.

ಗೊಂದಲ

(ವಿರೋಧ ಪಕ್ಷದ ಸದಸ್ಯರು ಭಾವಿಯಲ್ಲಿ)

ಅಧ್ಯಕ್ಷರು :– ಮಾನ್ಯ ಹನುಮೇಗೌಡರೇ, ತಾವು ಮಾತನಾಡಿ

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ಮಾನ್ಯ ಅಧ್ಯಕ್ಷರೇ, ಏನು ಸ್ವಾಮಿ ಇದು? ರೈತರ ಬಗ್ಗೆ ಕಾಳಜಿ ಇದ್ದರೆ ದಯಮಾಡಿ ಅವರೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಬೇಕು.

ಗೊಂದಲ

ಅಧ್ಯಕ್ಷರು :– 140 ಜನ ಒಂದು ಕಡೆ ಇದ್ದಾರೆ ನೀವು 40 ಜನ ಇರಬಹುದು. ನೀವು 40 ಜನ ಕಾರ್ಯಕಲಾಪಕ್ಕೆ ಅಡ್ಡಿ ಮಾಡುವುದು ನ್ಯಾಯವೇ? ನಾಯ್ಡುರವರೇ, Please hearme ಅವರು 140 ಜನ ಇದ್ದಾರೆ. ನೀವು ಕೆಲವರು ಮಾತ್ರ ಅಡ್ಡಿ ಪಡಿಸುವುದು ನ್ಯಾಯವೇ? ನಿಮಗೆ ಇಷ್ಟವಿಲ್ಲದಿದ್ದರೆ ದಯವಿಟ್ಟು ಲಾಬಿಗೆ ಹೋಗಿ ಕುಳಿತುಕೊಳ್ಳಿ ಫಸ್ಟ್‌ಕ್ಲಾಸ್ ಕಾಫಿ ತರಿಸಿಕೊಡುತ್ತೇನೆ.

ಗೊಂದಲ